ಈಗ ಅವಳು ಅವನೆಡೆ ದಿಟ್ಟಿಸಿ ನೋಡುತ್ತಿದ್ದಳು ಅವನಿಂದ ದೂರ ಸರಿಯುತ್ತಿದ್ದಾಳೋ ಎಂಬಂತೆ ಹಿಂದಕ್ಕೆ ಸರಿಯುತ್ತಾ ಹೋದಳು.

'ಆದರೆ ನೀನು ಡೊನಾಲ್ಡ್ ಬೋವರ್ಸ್! ಅವಳು ಉದ್ಗಾರ ಮಾಡಿದಳು; ಅವಳ ದನಿ ತುಸು ಜೋರಾಯಿತು. 'ಅಲ್ಲ ನೀನಲ್ಲ, ನೀನು ಡೊನಾಲ್ಡ್ ಪ್ಲಾಂಟ್.'

'ನಾನು ನಿನಗೆ ಫೋನಲ್ಲೇ ಹೇಳಿದ್ದೆ.'

ಅವಳು ತನ್ನ ಕಾಲ ತುದಿಯಲ್ಲೇ ನಿಂತಿದ್ದಳು ಅವಳ ಮುಖ ಮೂರ್ಛೆ ಹೋದವರಂತೆ ಹೆದರಿಕೊಂಡಿತ್ತು.

'ಪ್ಲಾಂಟ್! ಬೋವರ್ಸ್! ನನಗೆ ಹುಚ್ಚುಹಿಡಿದಂತಾಗಿತ್ತು. ಅಥವಾ ಅದು ಆ ಪಾನೀಯದ ಪ್ರಭಾವವೇ? ನಾನು ನಿನ್ನನ್ನು ಮೊದಲು ನೋಡಿದಾಗ ನನಗೇನೋ ಗಲಿಬಿಲಿಯಾಗಿತ್ತು. ಇಲ್ಲಿ ನೋಡು ! ನಾನು ನಿನಗೆ ಏನು ಹೇಳಿದ್ದೆ?'

ಅವನು ಆಲ್ಬಂ ಪುಟಗಳನ್ನು ತಿರುವಿ ಹಾಕುತ್ತಿರುವಾಗ ಒಬ್ಬ ವಿರಾಗಿಯಂತೆ ಶಾಂತವಾಗಿರಲು ಪ್ರಯತ್ನಿಸಿದನು.

'ಏನೂ ಇಲ್ಲ' ಅವನು ಹೇಳಿದನು. ಆ ಚಿತ್ರಗಳಲ್ಲಿ ಅವನು ಇಲ್ಲದಿರುವುದು ಅವನ ಕಣ್ಣುಗಳ ಮುಂದೆ ರೂಪತಾಳಿತು, ಪುನಃ ಅದೇ ಚಿತ್ರ ಅವನ ಕಣ್ಣುಗಳ ಮುಂದೆ ಬಂತು ಫ್ರಾಂಟೆನಾಕ್ – ಒಂದು ಗುಹೆಡೊನಾಲ್ಡ್ ಬೋವರ್ಸ್ – 'ನೀನು ನನ್ನನ್ನು ಹೊರಹಾಕಿಬಿಟ್ಟೆ!'

ನ್ಯಾನ್ಸಿ ಆ ಕೊಠಡಿಯ ಇನ್ನೊಂದು ಬದಿಯಿಂದ ಮಾತಾಡಿದಳು.

'ನೀನು ಈ ಕಥೆಯನ್ನು ಎಂದೂ ಹೇಳಬೇಡ,' ಅವಳು ಹೇಳಿದಳು, 'ಕಥೆಗಳಿಗೆ ಸುತ್ತಮುತ್ತ ಹಬ್ಬಲು ದಾರಿ ಇದೆ'.

'ಅಲ್ಲೇನು ಅಂತಹ ಕಥೆಗಳಿಲ್ಲ' ಅವನು ಅನುಮಾನಿಸಿದನು. ಆದರೆ ಅವನು ಅಂದುಕೊಂಡ, ಅವಳೊಬ್ಬಳು ಕೆಟ್ಟವಳಾದ ಚಿಕ್ಕ ಹುಡುಗಿಯಾಗಿದ್ದಳು ಎಂದು.

ಈಗ ಅವನಿಗೆ ಒಮ್ಮಿಂದೊಮ್ಮೆಲೆ ಡೊನಾಲ್ಡ್ ಬೋವರ್ಸ್ ಮೇಲೆ ಉರಿಉರಿಯಾದ ಹೊಟ್ಟೆಕಿಚ್ಚು ತುಂಬಿಕೊಂಡು ಬಂತು. ಹೊಟ್ಟೆಕಿಚ್ಚನ್ನು ಅವನ ಜೀವನದಿಂದ ಎಂದೋ ಶಾಶ್ವತವಾಗಿ ಹೊರಗಟ್ಟಿಬಿಟ್ಟಿದ್ದನು. ಆ ಕೊಠಡಿಯಲ್ಲಿ ಐದು ಹೆಜ್ಜೆಗಳನ್ನು ಇಟ್ಟಾಗ, ಆ ಐದು ಹೆಜ್ಜೆಗಳಲ್ಲಿ ಅವನು ಆ ಕೊಠಡಿಯಿಂದಾಚೆ ಇಪ್ಪತ್ತು ವರ್ಷಗಳ ಹಿಂದೆ ಹೋಗಲು ಹಿಂದಿನ ವಾಲ್ಟರ್ ಗಿಫರ್ಡ್ ಹೇಗಿದ್ದಳೋ ಅದನ್ನು ನೋಡಲು ದಾಪುಗಾಲುಗಳನ್ನು ಇಟ್ಟಿದ್ದ.

'ನನ್ನನ್ನು ಪುನಃ ಚುಂಬಿಸು, ನ್ಯಾನ್ಸಿ,' ಅವಳ ಕುರ್ಚಿಯ ಬದಿಯಲ್ಲಿ ಒಂದು ಮೊಣಕಾಲನ್ನು ಕೆಳಗಿಟ್ಟು ಕೈಯ್ಯನ್ನು ಅವಳ ಭುಜದ ಮೇಲಿಟ್ಟು ಅವನು ಹೇಳಿದನು. ಆದರೆ ನ್ಯಾನ್ಸಿಗೆ ಸಾಕಾಗಿ ಹೋಗಿತ್ತು.

'ನೀನು ಹೇಳಿದೆ, ನಿನಗೆ ವಿಮಾನವನ್ನು ಹಿಡಿಯಬೇಕು ಎಂದು.'

'ಅದೇನಿಲ್ಲ ಬಿಡು. ನಾನು ಅದನ್ನು ತಪ್ಪಿಸಿಕೊಳ್ಳಬಹುದು. ಅದೇನೂ ಅಷ್ಟು ಮುಖ್ಯವಲ್ಲ.'

'ದಯವಿಟ್ಟು ಹೋಗು,' ಅವಳು ತಣ್ಣಗಿನ ದನಿಯಲ್ಲಿ ಹೇಳಿದಳು. 'ಮತ್ತು ನನಗೆ ಏನು ಅನ್ನಿಸುತ್ತಿದೆ ಎಂಬುದರ ಬಗ್ಗೆ ಕಲ್ಪಿಸಿಕೋ.'

'ಆದರೆ ನೀನು ನನ್ನ ಗುರುತೇ ಇಲ್ಲವೆಂಬಂತೆ ನಟಿಸುತ್ತಿದ್ದೀಯಲ್ಲಾ,' ಅವನು ಅಳುಮುಂಜಿಯಂತೆ ಹೇಳಿದ, 'ಡೊನಾಲ್ಡ್ ಪ್ಲಾಂಟ್ ನಿನಗೆ ಗೊತ್ತೇ ಇರಲಿಲ್ಲ ಎಂಬಂತೆ ಮಾತಾಡ್ತಿದೀಯಲ್ಲಾ!'